ಅವನ ಶವವನ್ನು ಕಾಡಿನೊಳಗೆ ಹಿಪ್ಪೆಮರದ ಒಂದು ಕೊಂಬೆಗೆ ಕಟ್ಟಿ ನೇತುಹಾಕಲಾಯಿತು. ಅದರ ಫೋಟೊವನ್ನು ತೆಗೆದುಕೊಳ್ಳಲಾಯಿತು. 'ಕೂಲಿಕಾರರ ಎರಡು ಗುಂಪುಗಳ ನಡುವೆ ಮಾರಾಮಾರಿ ನಡೆಯಿತು, ಟೇಪಚೂ ಉರ್ಫ್ ಅಲ್ಲಾ ಬಕ್ಸ್‌ನ್ನು ಕೊಂದು ಮರಕ್ಕೆ ನೇತು ಹಾಕಲಾಗಿದೆ, ಪೊಲೀಸರು ಶವವನ್ನು ಪತ್ತೆಹಚ್ಚಿದ್ದಾರೆ. ಅಪರಾಧಿಗಳನ್ನು ಹುಡುಕಲಾಗುತ್ತಿದೆ' ಎಂದು ಪೊಲೀಸರು ರಿಪೋರ್ಟ್ ಬರೆದುಕೊಂಡರು.

ನಂತರ ಟೇಪಚೂನ ಶವವನ್ನು ಬಿಳಿ ರಗ್ಗಿನಿಂದ ಸುತ್ತಿ ಪೆಟ್ಟಿಗೆಯಲ್ಲಿಟ್ಟು, ಜೀಪಿಗೆ ಹಾಕಿ, ಪೊಲೀಸ್ ಚೌಕಿಗೆ ತರಲಾಯಿತು.

ರಾಯಗಢ, ಬಸ್ತರ್, ಭೋಪಾಲ್ ಎಲ್ಲಾ ಕಡೆಗಳಿಂದಲೂ ಪೊಲೀಸರ ಗ್ಯಾಂಗ್ ಬಂದಿದ್ದವು. ಸಿ.ಆರ್.ಪಿ.ಯವರು ಗಸ್ತು ಹಾಕುತ್ತಿದ್ದರು. ನಾಲ್ಕೂ ದಿಕ್ಕುಗಳಲ್ಲಿ ಹೊಗೆ ಏಳುತ್ತಿತ್ತು. ಬಿಡಾರಗಳನ್ನು ಸುಡಲಾಗಿತ್ತು. ನೂರಾರು ಕೂಲಿಕಾರರು ಸತ್ತರು. ಏನೇನು ಸಂಭವಿಸಿತ್ತೋ, ತಿಳಿಯದು.

ಬೆಳಗ್ಗೆ ಟೇಪಚೂನ ಶವವನ್ನು ಪೋಸ್ಟ್ ಮಾರ್ಟಮ್‌ಗಾಗಿ ಜಿಲ್ಲಾ ಆಸ್ಪತ್ರೆಗೆ ಕಳುಹಿಸಲಾಯಿತು. ಡಾ. ವರ್ಗಿಸ್ ಆಪರೇಶನ್ ಥಿಯೇಟರ್‌ನಲ್ಲಿದ್ದರು. ಅವರು ಧಾರ್ಮಿಕ ಕ್ರೈಸ್ತರಾಗಿದ್ದರು.



ಟ್ರಾಲಿ- ಸ್ಟ್ರೆಚರ್‌ನಲ್ಲಿ ಟೇಪಚೂನ ಶವವನ್ನು ಒಳಗೆ ತರಲಾಯಿತು. ಡಾ.ವರ್ಗಿಸ್ ಶವವನ್ನು ಪರೀಕ್ಷಿಸಿದರು. ಅಲ್ಲಲ್ಲಿ ಥ್ರೀ-ನಾಟ್-ಥ್ರೀ ಗುಂಡುಗಳು ಹೊಕ್ಕಿದ್ದವು. ಇಡೀ ಶವದಲ್ಲಿ ಗಾಯವಾಗದ ಒಂದು ಎಳೆಯಷ್ಟೂ ಜಾಗವಿರಲಿಲ್ಲ.

ಅವರು ತಮ್ಮ ಮಾಸ್ಕನ್ನು ಸರಿಪಡಿಸಿಕೊಂಡರು, ನಂತರ ಚಾಕು ತೆಗೆದುಕೊಂಡರು. ಅವರು ಶವದ ಮೇಲೆ ಬಾಗಿದಾಗ ಟೇಪಚೂ ತನ್ನ ಕಣ್ಣುಗಳನ್ನು ತೆರೆದ. ಅವನು ಮೆಲ್ಲನೆ ನರಳುತ್ತಾ ಹೇಳಿದ, 'ಡಾಕ್ಟರ್ ಸಾಹೇಬರೇ, ಈ ಗುಂಡುಗಳನ್ನೆಲ್ಲಾ ಹೊರಗೆ ತೆಗೆಯಿರಿ. ನನ್ನನ್ನು ಕಾಪಾಡಿ. ನನ್ನನ್ನು ಈ ನಾಯಿಗಳು ಕೊಲ್ಲಲು ಪ್ರಯತ್ನಿಸಿದ್ದಾರೆ.'

ಡಾಕ್ಟರ್ ವರ್ಗಿಸರ ಕೈಯಿಂದ ಚಾಕು ಜಾರಿ ಕೆಳಗೆ ಬಿತ್ತು. ಅವರ ಬಾಯಿಯಿಂದ ದೈನ್ಯತೆಯ ಕಿರುಚಾಟ ಹೊರಬಂತು, ಅವರು ಅಪರೇಶನ್ ಕೊಠಡಿಯಿಂದ ಹೊರಗೆ ಓಡಿ ಹೋದರು. ಇಂಥ ಆಗಬಾರದ ಮತ್ತು ಅಸಂಭವದ ಪ್ರಸಂಗವನ್ನು ಹೇಳಿ ನಾನು ನಿಮ್ಮ ಸಮಯವನ್ನು ಹಾಳು ಮಾಡುತ್ತಿದ್ದೇನೆಂದು ನೀವು ಹೇಳುವಿರಿ. ಈ ಇಡೀ ಕಥೆಯಲ್ಲಿ ಬಿಳಿ ಸುಳ್ಳನ್ನು ಹೊರತುಪಡಿಸಿ ಬೇರೇನೂ ಇಲ್ಲವೆಂದು ನೀವು ಹೇಳಬಹುದು.

ನಾನು ಸಹ ಮೊದಲೇ, ಇದು ಕಥೆಯಲ್ಲ, ವಾಸ್ತವಿಕತೆ ಎಂದು ಅರಿಕೆ ಮಾಡಿದ್ದೆ. ಜೀವನದ ವಾಸ್ತವಿಕತೆ, ಯಾವುದೋ ಒಂದು ಕಾಲ್ಪನಿಕ ಸಾಹಿತ್ಯಿಕ ಕಥೆಗಿಂತ ಹೆಚ್ಚು ಆಶ್ಚರ್ಯಕರವಾಗಿರುತ್ತದೆ ಎಂಬುದನ್ನು ನೀವೇಕೆ ಒಪ್ಪಿಕೊಳ್ಳುವುದಿಲ್ಲ... ಅಲ್ಲದೆ ಇದು ಒಬ್ಬ ಕೂಲಿಕಾರನ ಜೀವನದೊಂದಿಗೆ ನಡೆದ ಘಟನೆಯಾಗಿರುವಾಗ, ಯಾಕೆ ಒಪ್ಪಿಕೊಳ್ಳುವುದಿಲ್ಲ...

ನಮ್ಮ ಹಳ್ಳಿ ಮಡರ್ ಅಲ್ಲದೆ, ಯಾರು-ಯಾರಿಗೆ ಟೇಪಚೂನ ಪರಿಚಯವಿದೆಯೋ, ಅವರೆಲ್ಲರೂ ಟೇಪಚೂ ಎಂದೂ ಸಾಯಲಾರ, ಅವನು ಅತಿಮಾನುಷ ವ್ಯಕ್ತಿ ಎಂದು ಭಾವಿಸುತ್ತಾರೆ.

ನಿಮಗೆ ಈಗಲೂ ನಂಬಿಕೆಯಾಗದಿದ್ದರೆ ಎಲ್ಲಿ, ಯಾವಾಗ ನೀವು ಬಯಸುವಿರೋ, ಅಲ್ಲಿ, ಆಗ ನಾನು ನಿಮ್ಮನ್ನು ಟೇಪಚೂನೊಂದಿಗೆ ಭೇಟಿ ಮಾಡಿಸಬಲ್ಲೆ.

●